ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ಇದರ ಬಗ್ಗೆ ಸಚಿವರು ಉತ್ತರ ಕೊಡಬೇಕಾಗಿ ವಿನಂತಿಸುವೆ.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಅವರು ಹೆಚ್ಚು ಫಂಡ್‌ನ್ನು ಪೊಲೀಸ್ ವಸತಿ ಗೃಹಗಳ ದುರಸ್ತಿಗೆ ಕೊಡಬೇಕಾಗಿ ಹೇಳಿದ್ದಾರೆ. ಈ ವರ್ಷ ಅಂದರೆ 1997-98ರಲ್ಲಿ 3.67 ಕೋಟಿ ಹಣವನ್ನು ಕಟ್ಟಡಗಳ ದುರಸ್ತಿ ಮತ್ತು ಮೈನ್‌ಟೆನೆನ್ಸ್‌ಗೆ ಬಿಡುಗಡೆ ಮಾಡಿದ್ದೇವೆ. ಅವರು ಇತರೆ ವಿಚಾರವೇನು ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ವಿಷಯ: ಶಿವಮೊಗ್ಗ ನಗರದಲ್ಲಿ ಆಲ್ಕೊಳದಲ್ಲಿ ಕೆ.ಇ.ಬಿ.ಸಬ್‌ಸ್ಟೇಷನ್

533 (4113)

ಶ್ರೀ ಅಯನೂರ್ ಮಂಜುನಾಥ್ (ಹೊಸನಗರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಆಲ್ಕೊಳದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಬ್ ಸ್ಟೇಷನ್ ಯಾವಾಗ ಮಂಜೂರಾಯಿತು?. ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಈ ಸಬ್ ಸ್ಟೇಷನ್ ಸಾಮರ್ಥ್ಯ ಎಷ್ಟು ಅದಕ್ಕೆ ತಗಲುವ ವೆಚ್ಚ ಎಷ್ಟು? (ವಿವರಗಳನ್ನೊಳಗೊಂಡ ಮಾಹಿತಿ ನೀಡುವುದು)

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಶಿವಮೊಗ್ಗ ನಗರದಲ್ಲಿನ ಆಲ್ಕೊಳ ಸಬ್ ಸ್ಟೇಷನ್ ಯು.ಡಿ.ಐ.ಎಸ್. ಯೋಜನೆಯಲ್ಲಿ (ಎ.ಡಿ.ಬಿ) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಯಿಂದ 21-3-93ರಲ್ಲಿ ಮಂಜೂರಾಗಿದೆ. ಸದರಿ ಕಾಮಗಾರಿಯ ಪ್ರಗತಿಯು ಈ ಕೆಳಕಂಡಂತಿದೆ.

1. **110 ಕೆ.ವಿ.ಲೈನಿನ ಕೆಲಸ:** 1 ಕಿ.ಮೀ.ಮಾರ್ಗದ ಕೆಲಸ ಈಗಾಗಲೇ ಶುರುವಾಗಿದೆ. ಸ್ಪಬ್‌ಗಳನ್ನು ಹಾಕಿ, ಕಾಂಕ್ರೀಟ್ ಮಾಡಲಾಗಿದೆ.

2. **110 ಕೆ.ವಿ.ಸಬ್ ಸ್ಟೇಷನ್ ಕೆಲಸ:**

   ಅ) ಕಂಟ್ರೋಲ್ ರೂಮಿನ ಕೆಲಸ ಮುಗಿದಿದೆ.

   ಆ) ಸ್ಟೇಷನ್ ಕೆಲಸವೂ ಮುಗಿದಿದೆ-ಕಂಟ್ರೋಲ್ ಕೇಬಲ್ ಹಾಕುವ ಕೆಲಸ

ಮಾತ್ರ ಇನ್ನೂ ಬಾಕಿ ಇದ್ದು ಈಗ ಪ್ರಗತಿಯಲ್ಲಿದೆ.

ಈ ಸಬ್ ಸ್ಟೇಷನ್, ಡಿಸೆಂಬರ್ 1997ರ ಹೊತ್ತಿಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ.

ಆ) ಈ ಸಬ್ ಸ್ಟೇಷನ್‌ನ ಸಾಮರ್ಥ್ಯವಿಂತಿದೆ:

110: 11 ಕೆ.ವಿ.ಯ 2 X 10 ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ಒಳಗೊಂಡಿರುತ್ತದೆ.

2. **ತಗಲುವ ವೆಚ್ಚ:**

1)	ಲೈನ್ ಮಾರ್ಗದ ವೆಚ್ಚ	-	8.00	ಲಕ್ಷಗಳು
2)	110 ಕೆ.ವಿ.ಸಬ್ ಸ್ಟೇಷನ್ ವೆಚ್ಚ	-	308.00	-''-
	ಒಟ್ಟು ವೆಚ್ಚ	-	316.00	-''-

ಶ್ರೀ ಆಯನೂರ್ ಮಂಜುನಾಥ್: ಮಾನ್ಯ ಅಧ್ಯಕ್ಷರೆ, ಹಿಂದಿನ ವರ್ಷವೇನು ಉತ್ತರವನ್ನು ಕೊಟ್ಟಿದ್ದರು ಅದೇ ಉತ್ತರವನ್ನು ಈ ವರ್ಷವೂ ಕೊಟ್ಟಿದ್ದಾರೆ. ವಿದ್ಯುತ್ ಇಲಾಖೆಯಲ್ಲಿ ಬೆಲೆ ಜಾಸ್ತಿಯಾಗುತ್ತಿದೆಯೇ ಹೊರತು ಕೆಲಸವಾಗುತ್ತಿಲ್ಲ. ಹೋದ ವರ್ಷ ಈ ಪ್ರಶ್ನೆ ಕೇಳಿದಾಗ 1996ರ ಡಿಸೆಂಬರ್‌ನಲ್ಲಿ ಇದನ್ನು ಪ್ರಾರಂಭ ಮಾಡುವುದಾಗಿ ಉತ್ತರಕೊಟ್ಟಿದ್ದರು. ಈಗ 1997ರ ಡಿಸೆಂಬರ್‌ನಲ್ಲಿ ಮಾಡುವುದಾಗಿ ಹೇಳುತ್ತಿದ್ದಾರೆ. ಪ್ರಗತಿಯಲ್ಲಿದೆ, ಈ ರೀತಿ ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಟ್ಟರೆ ಸಾಕು ಎಂದು ಮಂತ್ರಿಗಳು ಭಾವಿಸಿದ್ದರೆ ನಾವು ಪ್ರಶ್ನೆ ಕೇಳುವುದರಲ್ಲಿ ಏನು ಅರ್ಥ ಉಳಿಯುತ್ತದೆ? ಹೋದ ವರ್ಷ ಕೊನೆಯಲ್ಲಿ ಮಾಡುತ್ತೇವೆ ಎಂದು ಹೇಳಿದೀರಿ, ಈ ವರ್ಷ ಕೂಡ ಕೊನೆಯಲ್ಲಿ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಆದುದರಿಂದ ಒಂದು ಗಟ್ಟಿಯಾಗಿ 1997-98 ಅಥವಾ 2000 ಇಸವಿಗೋ ಯಾವಾಗ ಮಾಡುತ್ತೀರಿ ಎಂದು ಹೇಳಿಬಿಡಿ.

ಶ್ರೀ ಶರಣ ಬಸಪ್ಪ ಎನ್.ದರ್ಶನಾಪೂರ್: ಸನ್ಮಾನ್ಯ ಅಧ್ಯಕ್ಷರೆ, ಈ ಅಲ್ಕೋಳ ಸಬ್‌ಸ್ಟೇಷನ್ ಕೆಲಸ. ಇದು ಸುಮಾರು 1993ರಲ್ಲಿ ಮಂಜೂರಾಗಿದ್ದು, ಇಲ್ಲಿ ಲ್ಯಾಂಡ್ ತೊಂದರೆ ಬಹಳ ಇತ್ತು. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಪ್ರಾಬ್ಲಮ್ ಅನ್ನು ಸಾಲ್ವ್ ಮಾಡಿದ್ದಾರೆ, ಮತ್ತು ಜೂನ್ 96ರಲ್ಲಿ ಕೆಲಸ ಪ್ರಾರಂಭ ಆಗಿದೆ. ಸುಮಾರು 3 ಕೋಟಿ 16 ಲಕ್ಷ ರೂ.ನಲ್ಲಿ ಈ ಕೆಲಸ ನಡೆಯುತ್ತಿದೆ. ಸ್ಟೇಷನ್ ಕೆಲಸ ಕಂಪ್ಲೀಟ್ ಆಗಿದೆ. ಬರೀ ಕೇಬಲ್ ಕೆಲಸ ಮಾತ್ರ ಉಳಿದಿದೆ. ಈಗ ಲೈನ್ ಕೆಲಸ ಒಂದು ಕಿ.ಮೀ. ಸ್ಟಬ್ಸ್ ಮತ್ತು ಟವರ್ಸ್ ಎಲ್ಲಾ ಎರೆಕ್ಟ್ ಆಗಿವೆ. ಈ ಸದನದ ಮೂಲಕ ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ, ಡಿಸೆಂಬರ್ ಅಂತ್ಯದೊಳಗೆ ಈ ಕೆಲಸವನ್ನು ಪ್ರಾರಂಭ

ಮಾಡುತ್ತೇವೆ ಮತ್ತು ಇರತಕ್ಕಂಥ ಸಬ್‌ಸ್ಟೇಷನ್ ಸಹ ಜಾಸ್ತಿ ಮಾಡುತ್ತೇವೆ.

ಶ್ರೀ ಕೆ.ಎನ್.ಈಶ್ವರಪ್ಪ: ಇದು ಕೆಇಬಿ ನೀತಿಗೆ ವಿರುದ್ಧವಾಗಿ ನಡೆಸುತ್ತಿರುವ ಸಬ್‌ಸ್ಟೇಷನ್ ಆಗಿದ್ದು, ಅದರ ಪಕ್ಕದಲ್ಲೇ ಪೆಟ್ರೋಲ್ ಬಂಕ್ ಸ್ಥಾಪನೆ ಮಾಡಲಿಕ್ಕೆ ಕೊಟ್ಟಿದ್ದಾರೆ. ಆ ಪೆಟ್ರೋಲ್ ಪಕ್ಕದಲ್ಲಿಯೋ ಕೋಟ್ಯಾಂತರ ರೂಪಾಯಿ ವಿನಿಯೋಗ ಮಾಡಿ ಸಬ್‌ಸ್ಟೇಷನ್ ಪ್ರಾರಂಭ ಮಾಡುತ್ತಿದ್ದಾರೆ. ಅಲ್ಲಿ ಸಬ್‌ಸ್ಟೇಷನ್ ಆಗಬೇಕು ಅಥವಾ ಪೆಟ್ರೋಲ್ ಬಂಕ್ ಆಗಬೇಕು. ಯಾರ ಪ್ರಭಾವಕ್ಕೆ ಒಳಗಾಗಿ ಅಲ್ಲಿ ಪೆಟ್ರೋಲ್ ಬಂಕ್‌ಗೆ ಅಪ್ಪಣೆ ಕೊಟ್ಟರೋ ನನಗೆ ಗೊತ್ತಿಲ್ಲ. ನಾಳೆ ಶಿವಮೊಗ್ಗದಲ್ಲಿ ಆ ಪೆಟ್ರೋಲ್ ಬಂಕ್ ಪಕ್ಕದಲ್ಲಿಯೇ ವಿದ್ಯುತ್ತಿನ ಸಬ್‌ಸ್ಟೇಷನ್ ಮಾಡಿ, ಅದರ ಹೈಟೆನ್‌ಷನ್ ವೈರ್‌ನಿಂದ ಪಕ್ಕಕ್ಕೆ ಹಾರಿದರೆ ಅದಕ್ಕೆ ಬೆಂಕಿ ಹತ್ತಿಕೊಂಡು, ಇಡೀ ಊರು ಸುಟ್ಟು ಹೋಗುವಂತಹ ಸ್ಥಿತಿ ಇದೆ. ಆ ಪೆಟ್ರೋಲ್‌ಬಂಕ್ ಅನ್ನು ಕಾನ್ಸಲ್ ಮಾಡತಕ್ಕ ಪ್ರಯತ್ನ ಏನಾದರೂ ನೀವು ಮಾಡುತ್ತೀರಾ ಎಂದು ತಮ್ಮ ಮುಖಾಂತರ ಸಚಿವರಲ್ಲಿ ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪೂರ್: ಇದರ ಬಗ್ಗೆ ಈಗಾಗಲೇ ಒಂದು ಪತ್ರವನ್ನು ಬರೆದಿರುವುದು ನನ್ನ ಗಮನಕ್ಕೆ ಬಂದಿದೆ. ಆದರೆ ಅದರ ಬಗ್ಗೆ ಖಚಿತವಾದ ಮಾಹಿತಿ ಇಲ್ಲ. ನಮ್ಮ ಇಲಾಖೆ ವತಿಯಿಂದ ಈ ಪೆಟ್ರೋಲ್ ಬಗ್ಗೆ ಈಗಾಗಲೇ ಚರ್ಚೆ ಆಗಿದೆ ಎಂದುನನಗನಿಸುತ್ತದೆ. ನಮ್ಮ ಇಲಾಖೆಗೆ ಇದರ ಬಗ್ಗೆ ಬರೆದಿದ್ದೇವೆ. ಇದು ಸೆಂಟ್ರಲ್ ಗೌರ್ನಮೆಂಟ್‌ಗೆ ಸಂಬಂಧಪಟ್ಟ ವಿಷಯ ಅವರು ಇದರ ಬಗ್ಗೆ ಯಾವ ತೀರ್ಮಾನ ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ನಮ್ಮ ಬಳಿ ಮಾಹಿತಿ ಇಲ್ಲ.

ಶ್ರೀ ಕೆ.ಎನ್.ಈಶ್ವರಪ್ಪ: ಅಧ್ಯಕ್ಷರೆ, ನನ್ನ ಪ್ರಶ್ನೆ ಏನು ಎಂದರೆ, ನಿಮ್ಮ ಇಲಾಖೆಯಿಂದ ಆ ಪೆಟ್ರೋಲ್‌ಬಂಕ್‌ಗೆ ಎನ್‌ಓಸಿಯನ್ನು ಕೊಟ್ಟಿದ್ದೀರಿ, ನೀವು ಎನ್‌ಒಸಿಯನ್ನು ಕೊಡದೆ ಹೋಗಿದ್ದರೆ ಅಲ್ಲಿ ಪೆಟ್ರೋಲ್‌ಬಂಕ್ ಆಗುತ್ತಾ ಇರಲಿಲ್ಲ. ನೀವು ಅದನ್ನು ಬೇರೆ ಕಡೆ ಶಿಫ್ಟ್ ಮಾಡಿ, ನೀವು ಇನ್ನೂ ನೂರು ಪೆಟ್ರೋಲ್‌ಬಂಕ್ ಕೊಡಿ ನನ್ನದೇನೂ ಅಭ್ಯಂತರ ಇಲ್ಲ. ಅದು ನಿಮ್ಮದು ಅಲ್ಲ, ಕೇಂದ್ರ ಸರ್ಕಾರದ್ದು. ಆ ಎನ್‌ಓಸಿಯನ್ನು ಕಾನ್ಸಲ್ ಮಾಡಿ ಪೆಟ್ರೋಲ್‌ಬಂಕ್ ಅನ್ನು ಬೇರೆ ಕಡೆ ಶಿಫ್ಟ ಮಾಡಿ. ಆ ಊರಿನ ಜನ ಬದುಕುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಆರಗ ಜ್ಞಾನೇಂದ್ರ: ಮ್ಯಾನ ಅಧ್ಯಕ್ಷರೆ, ಮಂತ್ರಿಗಳು ಈಗಾಗಲೇ ಉತ್ತರವನ್ನು ಹೇಳಿದ್ದಾರೆ. ಇಂಥ ಕೆಲಸ ಮಾಡುವುದಕ್ಕೆ ಅವರಿಗೆ ಹಣದ ಮತ್ತು ಮೆಟಿರಿಯಲ್ಸ್‌ನ ಅಡಚಣೆ ಇದೆ ಎಂದು ಹೇಳುತ್ತಾರೆ. ಯಾವ ರೀತಿ ಅಡಚಣೆ ಎಂಬುದು ನನಗಂತೂ ಗೊತ್ತಾಗುವುದಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡತಕ್ಕ, ಲೈನ್ ಎಳೆದಿರತಕ್ಕ ಗುತ್ತಿಗೆದಾರರಿಗೆ, ನಾಲ್ಕು ವರ್ಷಗಳಿಂದ ನಿಮ್ಮ ಇಲಾಖೆ ಹಣವನ್ನು ಪಾವತಿ ಮಾಡುತ್ತಿಲ್ಲ. ತೀರ್ಥಹಳ್ಳಿಯಲ್ಲಿ ವಿದ್ಯುತ್ ಗುತ್ತಿಗೆದಾರರು ಮೊನ್ನೆಯ ದಿನ ದೊಡ್ಡ

ಸ್ಟ್ರೈಕ್ ಮಾಡಿದ್ದಾರೆ. ನಿಮ್ಮಲ್ಲಿ ಇರತಕ್ಕಂಥ ಎಸ್.ಸಿ. ಅಲ್ಲಿರತಕ್ಕಂಥ ಎಕ್ಸಿಕ್ಯುಟೀವ್ ಇಂಜೀನಿಯರ್ ಬಿಲ್ ಮಾಡುತ್ತಿಲ್ಲ, ಮೆಟೀರಿಯಲ್ಸ್ ಇಲ್ಲ ಎಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ಇರತಕ್ಕಂಥ ಮೆಟೀರಿಯಲ್ಸ್ ಅನಧಿಕೃತವಾಗಿ ಪಂಪ್‌ಸೆಟ್ಟನ್ನು ಎಳೆದುಕೊಳ್ಳುವುದಕ್ಕೆ ಕಿಲೋಮೀಟರ್ ಗಟ್ಟಲೆ ವೈರಗಳು ಬೇರೆ ಬೇರೆ ಕಡೆ ಸರಬರಾಜು ಆಗುತ್ತಿದೆ. ಮಾಡಬೇಕಾದ ಕೆಲಸಗಳಿಗೆ ಮೆಟೀರಿಯಲ್ಸ್ ಇಲ್ಲ ಎಂಬ ನೆವ ಹೂಡುತ್ತಿದ್ದಾರೆ. ದಯಮಾಡಿ ನಿಮ್ಮ ಇಲಾಖೆಯನ್ನು ಸರಿ ಮಾಡತಕ್ಕ ಕೆಲಸ ಆಗಬೇಕು. ಬೆಂಗಳೂರಿನಲ್ಲಿ ಇಲ್ಲಿ ಕಾವೇರಿ ಭವನದಲ್ಲಿ ಸರಿ ಮಾಡುವಂಥ ಕೆಲಸವನ್ನು ನೀವು ಮಾಡಬೇಕು. ಇಲ್ಲ ಅಂದರೆ ನಮಗೆ ನ್ಯಾಯ ದೊರಕುವುದಿಲ್ಲ.

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿ ಮೀಸಲು ಪೊಲೀಸ್ ಬೆಟಾಲಿಯನ್ ಸ್ಥಾಪನೆ

534 (3766)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಕೋಟ್ಯಾಂತರ ರೂ.ಗಳ ಬಂಡವಾಳ ಹೂಡಿ ಕೈಗಾರಿಕೆಗಳು ಸ್ಥಾಪನೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ ಬ್ಯಟಾಲಿಯನ್ ಅನ್ನು ಬಳ್ಳಾರಿ ಜಿಲ್ಲೆಯಲ್ಲಿ ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ಹೌದು

ಆ) ಸದ್ಯಕ್ಕೆ ಬಳ್ಳಾರಿಯಲ್ಲಿ ಕೆ.ಎಸ್.ಆರ್.ಪಿಯ ಬೆಟಾಲಿಯನ್ ಸ್ಥಾಪಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಸುಮಾರು 15 ಸಾವಿರ ಕೋಟಿ, ರೂಪಾಯಿಗಳನ್ನು ಕೈಗಾರಿಕೆಗೋಸ್ಕರ ಎಲ್ಲಾ ಸಂಸ್ಥೆಗಳು ಮುಂದೆ ಬಂದಿದ್ದಾವೆ. ಈಗ ಸುಮಾರು ಅದರಲ್ಲಿ 50 ರಿಂದ 70ಸಾವಿರ ಜನ, ಡೈರಕ್ಟಾಗಿ, ಇನ್‌ಡೈರೆಕ್ಟಾಗಿ ಕೆಲಸ ಮಾಡುವ ಕೆಲಸಗಾರರು, ಇದರಲ್ಲಿರುತ್ತಾರೆ. ಮತ್ತು ಲಾ ಅಂಡ್ ಆರ್ಡರ್ ಪ್ರಾಬ್ಲಂ ಆಗುತ್ತದೆ. ಆದುದರಿಂದ ಗಮನದಲ್ಲಿ ಇಟ್ಟುಕೊಳ್ಳಬೇಕು. ಅದರ ಹಿನ್ನೆಲೆಯಲ್ಲಿ ನಮ್ಮ ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಆಂಧ್ರದ ಗಡಿ ಪ್ರದೇಶ ವಾಗಿರುವುದರಿಂದ ಎರಡು ಜಿಲ್ಲೆ ಮತ್ತು ಎಂಟು ತಾಲ್ಲೂಕು ಒಟ್ಟು ಆಂಧ್ರದ ಬಾರ್ಡರ್ ಏರಿಯಾಗಳಾಗಿವೆ. ಬಹಳಷ್ಟು ಕಳೆದ 3-4